doc-537
T.P-4

Regd No B G 182 ಗೋಮಾತಾಕೀ ಜೈ Monthly Independence Silver Jubilee Number August 1972 ಆಗಸ್ಟ್

ಗೋರಕ್ಷಣಕ್ಕೆ ಲೇಖನ ಕೊಡುತ್ತಿರುವವರಿಗೆ, ನೆರವು (ಡೊನೇರ್ಸ್) ನೀಡುತ್ತಿರುವವರಿಗೆ, ಪ್ರಚಾರಮಾಡುತ್ತಿರುವವರಿಗೆ ವಂದನೆಗಳು

ಅನೇಕ ಪ್ರತಿಗಳು ಉಚಿತವಾಗಿ ಹಂಚಲಾಗುತ್ತಿದೆ

ವಾರ್ಷಿಕ ಚಂದಾ ಅಂಚೆಮೂಲ್ಯ 80ಪೈಸೆ

ವಿನಂತಿ– ಸಕಲರೀತಿಯಲ್ಲೂ ನೆರವುನೀಡಿ

ಗೋರಕ್ಷಣ
GORAKSHANA

Office– 1067 Chamarajapuram Mysore 4

Please help in every way

This Humnitarian

– Propaganda Paper –

Many Papers Distributed Free

ಗೋರಕ್ಷಣ, ಅಹಿಂಸಾ ಪ್ರಚಾರ ಪತ್ರಿಕೆ

ದೇಶಾದ್ಯಂತ ಗೋವಧೆ ಕೂಡಲೆ ನಿಲ್ಲಲಿ

ವರ್ಷ 22 nd Year ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ ಬಿಡಿ ಪ್ರತಿ 5 ಪೈಸೆ

Cow Slaughter should be banned Immediately in commemoration of the Silver Jubilee of India's Independence

ಸ್ವಾತಂತ್ರ್ಯದ ರಜತೋತ್ಸವದ ಸಮಯದಲ್ಲಿ

★

ಭಾರತೀಯರೆಂದೂ ಬಂಧನವನ್ನು ಬಯಸುವವರಲ್ಲ; ಸ್ವಾತಂತ್ರ್ಯಕ್ಕಾಗಿ ಸರ್ವಸ್ವಾರ್ಪಣೆ ಮಾಡಲು ಸದಾ ಸಿದ್ಧರು. ತಂತ್ರಶಾಲಿ ಬ್ರಿಟಿಷರು ತಮ್ಮ ಬೂಟುಗಾಲಲ್ಲಿ ಭದ್ರವಾಗಿರಬೇಕೆಂದು ಹಲವಾರು ಆಟಬೀರಿದರು; ದೇಶಭಕ್ತ ಭಾರತೀಯರು ಅದಕ್ಕೆ ಮೋಸಹೋಗಲಿಲ್ಲ : ಅವರ ತಂತ್ರ ಎದುರಿಸಿ, ಸ್ವಾತಂತ್ರ್ಯಕ್ಕಾಗಿ ಮುಂದೆಬಂದರು; ಅದು 1857 ರಲ್ಲಿರಬಹುದು : ಆದೇ ವಿಷಯ 1947 ಕ್ಕೂ ಅನ್ವಯಿಸುತ್ತದೆ.

1857 ರಲ್ಲಿ ಬ್ರಿಟಿಷರ ವಿರುದ್ಧ ಭಾರತೀಯರು ತಲೆಯೆತ್ತಿ ನಿಲ್ಲಲು ಕಾರಣ ಅವರಲ್ಲಿದ್ದ ಗೋಭಕ್ತಿ : 1947 ರ ವರೆಗೂ ಅಡೇ ವಿಷಯಕ್ಕೆ ಆಂಗ್ಲೇಯರನ್ನು ಭಾರತೀಯರು ಎದುರಿಸಿರುವರು ; 1857 ಸಿಡಿದೆದ್ದ, ಭಾರತೀಯರಲ್ಲಿ ಒಡೆದು ಆಳುವ ಅಲ್ಲದೆ ಅನ್ಯಾನ್ಯ ಆಶೆ-ಆಮಿಷಗಳ ಮೂಲಕ ದೇಶದ್ರೋಹಿಗಳ ತಂಡವನ್ನು ರಚಿಸಿ, ಸ್ವಾತಂತ್ರ್ಯ ಸಮರಾಗ್ನಿಗೆ ತಣ್ಣೀರೆರಚಿಬಿಟ್ಟರು ಬ್ರಿಟಿಷರು ಬ್ರಿಟಿಷರನ್ನೋಡಿಸಲು ನಿಶ್ಶಸ್ತ್ರ ಭಾರತೀಯರು ಎದ್ದೇಳುವಬವಲು, ಸತ್ಯಾಗ್ರಹಮೂಲ್ಕ ಸ್ವಾತಂತ್ರ್ಯ ಸಂಪಾದಿಸಲು ಕೆಲವರು ಅಣಿಯಾದರು ; ಆದರೂ ಕ್ರಾಂತಿಕಾರಿಗಳು ಸುಮ್ಮನಾಗದೆ ತಮ್ಮ ರಕ್ತರಂಜಿತ ರಸ್ತೆಯಲ್ಲಿ ಅವರು ಅಂಜದೆ ಅಳುಕದೆ ಮುನ್ನಡೆದರು ; ಇವರೆಲ್ಲರ ಪ್ರಯತ್ನದ ಫಲವಾಗಿ ನಾವು ಸ್ವತಂತ್ರ್ಯ ಪಡೆದು, ಇಂದು ರಜತೋತ್ಸವವನ್ನು ಆಚರಿಸುತ್ತಿದ್ದೇವೆ.

ಬ್ರಿಟಿಷರು ಗೋಭಕ್ಷಕರಿರುವ ಕಾರಣ ಅವರನ್ನೋಡಿಸಲು ಪ್ರಯತ್ನಿಸಬೇಕೆಂದು ಕ್ರಾಂತಿಕಾರಿಗಳೂ ಸತ್ಯಾಗ್ರಹಿಗಳೂ ರಕ್ಷೆ ಕಟ್ಟಿಕೊಂಡಿದ್ದರು.

ತಮಿಳುನಾಡಿನ ತಿರುನಲ್ವೇಲಿ ಕೈಲ್ವೇ ನಿಲ್ದಾಣದಲ್ಲಿ ಆಂಗ್ಲಾ ಜಿಲ್ಲಾ ನ್ಯಾಯಾಧಿಕಾರಿ ಐಸ್‌ನನ್ನು ಗುಂಡುಹೊಡೆದು ಸಾಯಿಸಿದ ತರುಣ ವಾಂಚಿನಾಥ್‌ನನ್ನು ಖೈದು ಮಾಡಿದಾಗ ಅವನ ಬಳಿ ದೊರೆತ ಪತ್ರದಲ್ಲಿದ್ದ ಸಾರಾಂಶ– ಗೋಭಕ್ಷಕ ಇಂಗ್ಲೀಷರನ್ನು ನಾಯಿಗಳನ್ನು ಕೊಲ್ಲುವಂತೆ ಸಾಯಿಸಬೇಕು ; ಅದಕ್ಕೆ ಆಯುಧಗಳು ಸಿಗದಿದ್ದಲ್ಲಿ ಉಗುರನ್ನೇ ಆಯುಧವನ್ನಾಗಿಸಿಕೊಳ್ಳಬೇಕು ಪ್ರಭು ರಾಮಚಂದ್ರ, ಭಗವಾನ್ ಶ್ರೀಕೃಷ್ಣ, ರಾಣಾ ಪ್ರತಾಪ್, ಛತ್ರಪತಿ ಶಿವಾಜಿ ಮಹಾರಾಜರ ವಂಶದವರು ಗೋಹಂತಕ ಬ್ರಿಟಿಷರನ್ನು ಹೇಗೆ ಸಹಿಸಿಕೊಂಡಿರುವರು ?

ವಾಂಚಿನಾಥನಿಗೆ ಪ್ರೇರೇಪಣೆಯನ್ನಿತ್ತಿದ್ದು ಗೋಸಂರಕ್ಷಣೆಯೇ ಆಗಿದೆ ಎಂಬುದು ಗಮನಾರ್ಹವು

ಸ್ವಾತಂತ್ರ್ಯಕಿಂತಲೂ ಗೋಸಂರಕ್ಷಣೆ, ಗೋಹತ್ಯೆ ಪ್ರತಿಬಂಧಕವೇ ತಮಗೆ ಮುಖ್ಯವೆಂದಿರುವರು ಗಾಂಧಿ ಮಹಾತ್ಮಾ.

ರಾಮಕೃಷ್ಣ ಪರಮಹಂಸರು, ಸ್ವಾಮಿ ದಯಾನಂದರು, ಶ್ರದ್ಧಾನಂದರು, ಪಂಡಿತ ಮದನಮೋಹನ ಮಾಳವೀಯರು ಲೋಕಮಾನ್ಯ ಬಾಲ ಗಂಗಾಧರ ತಿಲಕರು ಪರಮಪೂಜನೀಯ ಡಾ|| ಕೇಶವ ಬಲರಾಂ ಹೆಗ್ಡೇವಾರರು.....ಮುಂತಾದವರು ಗೋಹತ್ಯೆ ನಿಷೇಧಕ್ಕಾಗಿ ಪ್ರಯತ್ನಿಸಿರುವರುವದೇ ಅಲ್ಲದೆ, ಶೂಖಾಗಳು ಬ್ರಿಟಿಷರನ್ನೋಡಿಸಲು ಖಡ್ಗಧಾರಿಗಳಾದದ್ದೂ ಇದಕ್ಕೇನೇ.

ಬೆಳ್ಳಿ ಹಬ್ಬದ ಸಮಯದಲ್ಲಿ ಖೈದಿಗಳ ಬಿಡುಗಡೆ, ಅವರ ಶಿಕ್ಷಾವಧಿ ಕಡಮೆಗೊಳಿಸುವ ಮರಣದಂಡನೆಗೆ ಗುರಿಯಾಗಿರುವವರಿಗೆ ಕ್ಷಮಾದಾನದ ಶಾಂತಿಪ್ರಿಯತೆ ಮತ್ತು ಉದಾರತೆ ಪ್ರಕಟಿಸುವ ಯೋಜನೆಯೂ ಇರುವಾಗ, ಗೋಮಾತೆಯ ಮೇಲೂ ಕರುಣೆ ತೋರಿಸಿ, ಅದರ ಹತ್ಯೆ ಕೂಡಲೇ ನಿಲ್ಲುವಂತಾಗಲಿ.

ಭಾರತೀಯರೆಲ್ಲರೂ ಈ ಉತ್ಸವ ಕಾಲದಲ್ಲಿ ಗೋವಧೆ ಪ್ರತಿಬಂಧಿಸುವ ಕಾನೂನು ಎಲ್ಲಾ ಕಡೆಗಳಲ್ಲೂ ಜಾರಿಗೆ ಬರುವಂತಾಗಲೆಂದು ಪ್ರಯತ್ನಿಸುವುದು ಅವರ ಕರ್ತವ್ಯವೇ ಸರಿ. — ಶಿವಶಂಕರ

ಪ್ರಾಚೀನ ಭಾರತದಲ್ಲಿ ಗೋಸಂವರ್ಧನೆ

ಲೇಖಕರು : ಅನಂತಕೃಷ್ಣ ಜೋಯಿಸ್ — ಆಧಾರ : ಹಿಂದೀ ಗೋರಕ್ಷಣ

●

[ಮುಂದುವರಿದುದು]

ಗೋವುಗಳ ಸಮೂಹಕ್ಕೆ ಅವುಗಳ ಸಂಖ್ಯಾಬಲದ ಆಧಾರದ ಮೇರೆಗೆ ಹೆಸರಿಡುತ್ತಿದ್ದರು. ಹತ್ತು ಸಹಸ್ರ ಗೋವುಗಳ ಸಮೂಹಕ್ಕೆ ವ್ರಜ ಅಥವಾ ಗೋಕುಲವೆಂದೆನ್ನುತ್ತಿದ್ದರು. ಗೋವುಗಳ ಪಾಲನೆಗಾಗಿ " ಗೋಪಾಲನಾ ಶಾಸ್ತ್ರ " ವು ವೈದೀಕ ಕಾಲದಲ್ಲಿಯೇ ಪ್ರಾರಂಭಗೊಂಡು ವಿಕಾಸಹೊಂದಿತು. ಪೂರ್ವೀಕರು ತಮ್ಮ ಸರ್ವಸ್ವವನ್ನು ಗೋಪಾಲನೆಗೇ ಅರ್ಪಿಸುತ್ತಿದ್ದರು. ಪೌರಾಣಿಕ ಕಾಲದಲ್ಲಿ ಗೋಪಾಲನಾ ಶಾಸ್ತ್ರವು ಅತೀ ಪ್ರಾಮುಖ್ಯ ಸ್ಥಾನವನ್ನು ಪಡೆಯಿತು. ಗೋವುಗಳ ಪಾಲನೆಗೆ ಗೋಶಾಲೆಗಳು ಹೇಗಿರಬೇಕು, ಎಲ್ಲಿರಬೇಕು ಎಂಬುದಕ್ಕೆ ಸ್ಕಂದಪುರಾಣದಲ್ಲಿ ಈ ರೀತಿ ಹೇಳಿದೆ—

" ಗೋಶಾಲೆಯು ವಿಸ್ತಾರವಾಗಿಯೂ, ಮಳೆ ಬೀಳದಂತೆಯೂ, ಬಿಸಿಲಿಗೆ ಪ್ರವೇಶವಿಲ್ಲದಂತೆಯೂ ಒಳ್ಳೆಯ ಗಾಳಿ (ಹವೆ) ಇರುವಂತೆಯೂ, ಸಮವಾದ ಹಾಗೂ ಮೆತ್ತನೆಯ ನೆಲದಿಂದಲೂ ಕೂಡಿರಬೇಕು ; ಹೊಗೆಯಾಗಲೀ ಶೀತಳ ಹವೆಯಾಗಲೀ ಗೋಶಾಲೆಯಲ್ಲಿರಕೂಡದು ; ಅವಕ್ಕೆ ಮೇವನ್ನು ಹಾಕಲು ವಿಶಾಲವಾದ ಹಾಗೂ ಶುಚಿಯಾದ ಸ್ಥಾನವಿರಬೇಕು ; ಅವುಗಳನ್ನು ಕಟ್ಟಲು ಒರಟಾದ ಹಗ್ಗಗಳನ್ನು ಉಪಯೋಗಿಸಕೂಡದು, ಕೋಮಲವಾದ ಹಾಗೂ ಮೃದುವಾದ ಹಗ್ಗವನ್ನೇ ಉಪಯೋಗಿಸಬೇಕು ; ಸೊಳ್ಳೆ ಹಾಗೂ ಇತರ ಕ್ರಿಮಿಕೀಟಗಳ ಬಾಧೆಯನ್ನು ತಪ್ಪಿಸಲು ಗೋಶಾಲೆಯನ್ನು ಪದೇಪದೇ ಜಿನ್ನಾಗಿ ಶುದ್ಧಿಮಾಡಿ ಒಳ್ಳೇ ಸುಗಂಧವಾದ ದ್ರವವನ್ನು ಹಾಕಬೇಕು ; ಅವುಗಳಿಗೆ ಕುಡಿಯಲು ಸ್ವಚ್ಛವಾದ ನೀರನ್ನು ನೀಡಬೇಕು : ಅದರ ಮೇಲ್ವಿಚಾರಣೆ ಹಾಗೂ ಯೋಗಕ್ಷೇಮವನ್ನು ನೋಡಿಕೊಳ್ಳಲು ಒಳ್ಳೆಯ ವೇತನ ಕೊಟ್ಟು ಒಬ್ಬ ನೌಕರನನ್ನು ಇಟ್ಟುಕೊಳ್ಳಬೇಕು '.

ಈ ರೀತಿ ಸದೃಢವಾಗಿಯೂ ಸುಂದರವಾಗಿಯೂ, ಸ್ವಚ್ಛವಾಗಿಯೂ ಗೋಶಾಲೆಯಿದ್ದ ಪಕ್ಷದಲ್ಲಿ ಒಂದು ವೇಳೆ ಅದಕ್ಕೆ ಪೂರ್ಣವಾಗಿ ಹೊಟ್ಟೆ ತುಂಬದಿದ್ದರೂ ಸ್ವಸ್ಥವಾಗಿರುತ್ತವೆ; ಅವುಗಳ ಆರೋಗ್ಯ ಕೆಡಲಾರದು. ಹಾಗಿಲ್ಲದೆ ಅವುಗಳ ಸೆಗಣಿಯನ್ನೂ, ಮೂತ್ರವನ್ನೂ ತೆಗೆಯದ ಅಥವಾ ತೆಗೆದರೂ ಸರಿಯಾಗಿ ಶುದ್ಧಿಗೊಳಿಸದೆ ಹೋದ ಪಕ್ಷದಲ್ಲಿ ಗೋವುಗಳು ರೋಗಗ್ರಸ್ತವಾಗುತ್ತವೆ. ಈ ವಿಚಾರವನ್ನು ಶ್ರೀ ಪರಾಶರ ಮುನಿಗಳು ಕೃಷಿಸಂಗ್ರಹ ವಿಷಯದಲ್ಲಿ ವ್ಯಕ್ತಪಡಿಸಿದ್ದಾರೆ. ಅದು ಗೋಪಾಲನಾಶಾಸ್ತ್ರದಲ್ಲಿ ಸ್ವಚ್ಛತೆಗೆ ನೀಡಲಾಗಿರುವ ಮಹತ್ವಕ್ಕೆ ಸಾಕ್ಷೀಭೂತವಾಗಿದೆ. ಪದ್ಮಪುರಾಣವು ಹೇಳುತ್ತದೆ– ಏನೆಂದರೆ, ಬುದ್ಧಿವಂತನಾದ ವ್ಯಕ್ತಿಯು ಗೋಶಾಲೆಯನ್ನು ತನ್ನ ಶಯನಗೃಹದೋಪಾದಿಯಲ್ಲಿ ಸ್ವಚ್ಛತೆಯಿಂದ ಇರಿಸಬೇಕು ಮತ್ತು ಗೋವುಗಳಲ್ಲಿ ದಯೆಯುಳ್ಳವನಾಗಿರಬೇಕು.

ಬ್ರಹ್ಮಪುರಾಣದಲ್ಲಿಯಾದರೊ ಗೋಪಾಲನಾ ವಿಷಯದಲ್ಲಿ ವಿಸ್ತೃತವಾಗಿ ವರ್ಣನೆಯಿದೆ ಅದರ ಅನುಸಾರವಾಗಿ ಗೋವು ಮತ್ತು ಅದರ ಮೂತ್ರವನ್ನು ತಿರಸ್ಕಾರ ದೃಷ್ಟಿಯಿಂದ ನೋಡಕೂಡದು. ವೃಕ್ಷದ ನೆರಳಿನಲ್ಲಿಯೂ, ವಿಪರೀತ ಗಾಳಿ ಇಲ್ಲದ ಸ್ಥಳದಲ್ಲಿಯೂ, ಹೆಚ್ಚು ಶೀತವೂ ಅಲ್ಲದ ಮತ್ತು ಹೆಚ್ಚು ಉಷ್ಣವೂ ಅಲ್ಲದ (ಬಿಸಿಲು ಇತ್ಯಾದಿ) ಸ್ಥಳದಲ್ಲಿ ಗೋವುಗಳನ್ನು ಕಟ್ಟಬೇಕು.

ಪ್ರಗತಿಯ ನವಯುಗ

ಭಾರತದ ಸ್ವಾತಂತ್ರ್ಯವು ಕರ್ನಾಟಕದ ಏಕೀಕರಣಕ್ಕೆ ಪಾರಿ ಮಾಡಿ ಕೊಟ್ಟಿತು; ಫಲವಾಗಿ ನವ ಮೈಸೂರು ರಾಜ್ಯ 1956 ರಲ್ಲಿ ಜನ್ಮ ತಾಳಿತು.

ಅಂದಿನಿಂದ ರಾಜ್ಯವು ಅಭಿವೃದ್ಧಿಯ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿ ಅಭಿವೃದ್ಧಿಯ ಮಾರ್ಗದಲ್ಲಿ ಮುನ್ನಡೆಯುತ್ತಿದೆ.

ಮೈಸೂರು ರಾಜ್ಯವು ಕೂಡ ಸ್ವತಂತ್ರ ಭಾರತದ ಇತರ ಪ್ರದೇಶಗಳ ಜೊತೆಗೆ ಹೆಜ್ಜೆಗೆ ಹೆಜ್ಜೆಯಿಟ್ಟು ಈ ಸುಧಾರಣೆಯಂತಹ ಪ್ರಗತಿಪರ ಕ್ರಮಗಳ ಮುಖಾಂತರ ಆರ್ಥಿಕ ಹಾಗೂ ಸಾಮಾಜಿಕ ರಂಗದಲ್ಲಿ ನವ ಯುಗವನ್ನು ಪ್ರಾರಂಭಿಸುತ್ತಿದೆ.

ಮೈಸೂರು ಸರ್ಕಾರದ ವಾರ್ತಾ

ಮತ್ತು ಪ್ರವಾಸೋದ್ಯಮ

ಇಲಾಖೆಯಿಂದ ಪ್ರಕಟಿತ

ಆಗಸ್ಟ್ ಹದಿನೆದು

ಬಂದಿತು ನೂತನದಿನ ಹದಿನೈದು
ಆಗೋಸ್ತು ತಿಂಗಳ ಮಧ್ಯದಲಿ
ಹಿಂದಿನ ನೆನಹನು ಸ್ಮರಿಸಲಿಕೆಂದು
ದೇಶ ಹಿತೈಷಿಯ ಬಾಳಿನಲಿ.

ಗಾಂಧಿ ಸುಭಾಷರ ದಿವ್ಯ ಚರಿತ್ರೆಯ
ಹೊಂಗಡವೀಶುಭ ಹದಿನೈದು
ಹುತಾತ್ಮಕೆಲ್ಲಕೆ ಶ್ರದ್ಧಾಂಜಲಿಯ
ಅರ್ಪಿಸುವೀದಿನ ಬಂದಿಹುದು.

ಓ ದಿವ್ಯಾತ್ಮನೇ, ಹೃದಯದೆ ಹಂಬಲ
ತೀರಿತೆ? ಈಗಣ ಸ್ಥಿತಿ ಕಂಡು !
ಏನ್ನುತ ಕಂಬನಿ ಮಿಡಿಯುವ ಹಲಕೆಲ
ದೇ ಭ. ಠ ಖೇದದ ಉಸಿಗೊಂಡು.

ಬಂದಿತು ವಾರ್ಷಿಕ ಸ್ವಾತಂತ್ರೋತ್ಸವ
ಭಾರತದೇಶದ ಪುಣ್ಯದಿನ
ತಂದಿತು ಸ್ಫೂರ್ತಿ ಕಾರ್ಯೋತ್ಸಾಹವ
ಕಾಣಲು ಭಾಗ್ಯದ ಭಾಸ್ಕರನ

ಬನದಲಿ ತರುಲತೆ.ಹೂಗಳು ತೊನೆದು
ಕಳಿಸಿವೆ ಮಂಗಳ ಸಂದೇಶ
ಶುಕ ಪಿಕ ಸುಮಧುರ ಕಲರವ ಮಿಡಿದು
ಸುರಿದಿವೆ ಶಾಂತಿಯ ಹೊಂಗಲಶ.

— ವಜ್ರಳ್ಳಿ ಗಣಪತಿಶರ್ಮಾ

ಸ್ವಾತಂತ್ರ್ಯಾನಂತರ

ನಮ್ಮ ರಾಷ್ಟ್ರ ಆರ್ಥಿಕರಂಗದಲ್ಲಿ ಸಾಧಿಸಿದ ಪ್ರಗತಿಯ ಸ್ಥೂಲ ಸೂಚನೆ ಇಲ್ಲಿದೆ.

ಕೃಷಿ ಉತ್ಪಾದನೆ ಹೆಚ್ಚುಕಡಮೆ ದ್ವಿಗುಣ ಗೊಂಡಿದೆ.

ಔದ್ಯಮಿಕ ಉತ್ಪಾದನೆ ನೂರಕ್ಕೆ 82 ಪಾಲು ಹೆಚ್ಚಾಗಿದೆ

ವಿದ್ಯುತ್ ಸ್ಥಾಪಕ ಶಕ್ತಿ ಎಂಟು ಪಾಲು ಅಧಿಕಗೊಂಡಿದೆ

ರಸ್ತೆಗಳ ಜಾಲ ಇಮ್ಮಡಿಯಾಗಿದೆ.

ಪ್ರತಿಯ ಸರಾಸರಿ ವಯೋಮಾನ 32 ವರ್ಷಗಳಿಗೇರಿದೆ.

ಅಂದು ಪ್ರತಿ ನೂರರಲ್ಲಿ 16 ಮಂದಿ ಓದು ಬರಹ ಬಲ್ಲವರಿದ್ದರು ; ಈಗ ಪ್ರತಿ ಶತ 30 ಮಂದಿ ಸಾಕ್ಷರರು.

ಗ್ರಾಮಾಂತರ ಅಂಚೆ ಕಚೇರಿಗಳ ಸಂಖ್ಯೆ ಮೂರು ಪಾಲು ಹೆಚ್ಚಿದೆ.

ವೈದ್ಯರ ಸಂಖ್ಯೆ ದ್ವಿಗುಣಿತವಾಗಿದೆ.

ಒಟ್ಟು ರಾಷ್ಟ್ರೀಯ ಉತ್ಪನ್ನ (GNP 33 ಕೋಟಿ ರೂಪಾಯಿಗಳಿಗೆ ಏರಿದೆ.

ನಿರ್ಯಾತ ವ್ಯಾಪಾರ ಮೊತ್ತ ಮೂರು ಪಾ ಪಾಲು ಹೆಚ್ಚಾಗಿದೆ

ಪ್ರಾಥಮಿಕ ಶಾಲೆಗಳಿಗೆ ಹೋಗುವ ಹುಡುಗ - ಳ ಸಂಖ್ಯೆ ಎರಡು ಪಾಲು ಅಧಿಕ ಗೊಂಡಿದೆ.

ಹಸುಗಳು ಮೇಯುವ ಕಾಲ ನಿರ್ಧರಿಸಲು

ಹ್ಯಾನೋವರ್ (ಡಾಡ್)— ಫೆಡರಾಲ್ ರಿಪಬ್ಲಿಕ್ ಜರ್ಮನಿಯಲ್ಲಿ ಹಸುಗಳು ಮೇಯುವ ಕಾಲವನ್ನು ನಿರ್ಧರಿಸಲು ಕತ್ತಿಗೆ ಗಡಿಯಾರವನ್ನು ಕಟ್ಟಿ ಬಿಡುವ ವ್ಯವಸ್ಥೆ ಮಾಡಿ ಪ್ರಯೋಗ ನಡೆಸುತ್ತಾರೆ : ಹಸುವು ಮೇಯುವುದಕ್ಕಾಗಿ ಕತ್ತನು ಬಗ್ಗಿಸಿದರೆ ಸಾಕು, ಗಡಿಯಾರವು ಕಾಲವನ್ನು ಸೂಚಿಸಿ ತಾನಾಗಿ ಬರೆದುಕೊಳ್ಳುತ್ತದೆ ; ಅದು ಮತ್ತೆ ಕತ್ತೆತ್ತಿದಾಗ ನಿಂತುಹೋಗುವುದು. ಇನ್ನು ಮುಂದೆ ರಾತ್ರಿಯ ಕಾಲದಲ್ಲಿ ವರ್ಣರಂಜಿತ ದೀಪಗಳನ್ನು ಅಳವಡಿಸಿ ರಾತ್ರಿಯಲ್ಲಿ ಮೇಯುವ ಕಾಲವನ್ನೂ ನಿರ್ಧರಿಸಲಾಗುವುದು. (ಯೂ ಪಿ ಎಸ್)

ದಿವ್ಯವಾಣಿ

ಕ್ಷಮಿಸುವುದು ಶಿಕ್ಷಿಸುವುದಕ್ಕಿಂತ ಹೆಚ್ಚಿನ ಘನತೆಯಿಂದ ಕೂಡಿದ್ದಾಗಿದೆ.

— ಮಹಾತ್ಮಾ ಗಾಂಧಿ

ವುಡ್‌ಲಾಂಡ್ 11-8-72 ರಿಂದ ಅಮೋಘ 15ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ಅಪೆರಾ 11 8 72ರಿಂದ

— ಆತ್ಯಮೋಘ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಲಾಲ್ ಪತ್ತರ್

Turning the Wheel of Happiness

DALMIA CEMENT (BHARAT) LIMITED

Dalmiapuram P. O., Tiruchirapalli Distt.
(Tamil Nadu)

Manufacturers of

'ROCKFORT' BRAND

DALMIA Portland Cement

ALSO

Mine-Owners & Suppliers of
High Grade Iron Ore for Export

H. O: 4 Scindia House, New Delhi - 1.

Protect the Cow



ಹೀನಾಮಾನ ಕಾರ್ಯ

ಹೈದರಾಬಾದು— ವಿಜಯವಾಡಪಟ್ಟಿ ತಾ || 15 ರಂದು ಸರ್ವೋದಯ ನಾಯಕ ಶ್ರೀ ಗೋರ ಏರ್ಪಡಿಸಿರುವ' ಗೋಮಾಂಸ ಹಂದಿಮಾಂಸ " ಭೋಜನಕ್ಕೆ ಆ ಚಾ ರ್ಯ ವಿನೋಬಾ ಛಾಪೆಯುವಳು ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ – ಆಂಧ್ರಪ್ರದೇಶ ಸರ್ವೋದಯ ಕಾರ್ಯದರ್ಶಿಯವರಿಗೆ ತಂತಿ ಮೂಲಕ ತಿಳಿಸಲಾಗಿದ್ದು, ಇದು ಕೇವಲ ಗೋರಯವರ ಕಾರ್ಯವಾಗಿದ್ದು, ಸರ್ವೋದಯಕ್ಕೆ ಸಂಬಂಧಪಟ್ಟದ್ದಲ್ಲವೆಂದೂ ತಿಳಿಸಲಾಗಿದೆ – ಇಲ್ಲಿ ತಂಗಿರುವ ಪೂರಿ ಜಗದ್ಗುರುಗಳವರೂ ಈ ಏರ್ಪಾಟನ್ನು ತ್ಯಜಿಸಬೇಕೆಂದು ಗೋರಯವರನ್ನು ವಿನಂತಿಸಿರುವರಲ್ಲದೆ, ಇದನ್ನು ನಿಲ್ಲಿಸಲು ಶ್ರೀ ಜಯಪ್ರಕಾಶ ನಾರಾಯಣರಲ್ಲಿಯೂ ಮನವಿ ಮಾಡಿದ್ದಾರೆ.

ದನಗಳ ಮೇವುಗಳ ರಫ್ತು ಪ್ರತಿಬಂಧಕ

ಬೆಂಗಳೂರು— ರಾಜ್ಯದಲ್ಲಿಯ ಕಷ್ಟ ಪರಿಸ್ಥಿತಿಗಾಗಿ, ಜಾನುವಾರುಗಳ ಮೇವುಗಳಾದ ವಿವಿಧ ಒಣಹುಲ್ಲು, ತೌಡುನುಚ್ಚು ಹೊಟ್ಟುಗಳನ್ನು ರಾಜ್ಯದಿಂದ ರಫ್ತು ಮಾಡುವುದನ್ನು ಪ್ರತಿಬಂಧಿಸಲಾಗಿದೆ.

ಚಪ್ಪಾಳೆ ದಾಖಲೆ

ಡೀರಫೀಲ್ಡ್ (ಇಲಿನಾಯ್ಸ್)– 14 ವರ್ಷದ ಸ್ಪವರ್ಟ್-ಕೇಬರ್ ಮತ್ತು ಅವನ ಸ್ನೇಹಿತ ಕ್ರೇಗ್ ಕ್ರಿಸ್ಟ್ 18 ಗಂಟೆಗಳ ಕಾಲ ನಿರಂತರ ಚಪ್ಪಾಳೆ ಹೊಡೆದು ವಿಶ್ವದಾಖಲೆ ಸ್ಥಾಪಿಸಿದ್ದಾರೆ.

ಸಂದೇಶ

ಸೌಜನಶೀಲ ನವಸಮಾಜದತ್ತ ಸಾಗುತ್ತಿರುವ ಈ ದಾರಿಯಲ್ಲಿ ಆತ್ಮವಿಶ್ವಾಸ ಹಾಗೂ ಧೈರ್ಯ ನಮ್ಮ ಸಂಗಾತಿಯಾಗಿರಲಿ. ಎಲ್ಲರಿಗೂ ನ್ಯಾಯ, ಸಮಾನ ಅವಕಾಶ, ಪ್ರತಿ ವ್ಯಕ್ತಿಗೂ ಪೂರ್ಣ ವಿಕಾಸ ಹೊಂದಲು ಅನುಕೂಲತೆ, ಗಂಡುಹೆಣ್ಣೆನ್ನದೆ ಪ್ರತಿಯೊಬ್ಬರಿಗೂ ಇತರರ ಬಗೆಗೆ ತನಗಿರುವ ಹೊಣೆಯನ್ನು ಅರಿತುಕೊಂಡು ಪ್ರಜಾಪ್ರಭುತ್ವ ಪ್ರಭುತ್ವ ಪದ್ಧತಿಯಲ್ಲಿ ಕಾರ್ಯ ಪ್ರವೃತ್ತರಾಗುವ ಸುಸಂದರ್ಭ – ಇದು ಈ ಸಮಾಜದ ಸ್ವರೂಪ.

(ಇಂದಿರಾ ಗಾಂಧಿ)

ಖೈದಿಗಳಿಗೆ ರಿಯಾಯಿತಿ

ಬೆಂಗಳೂರು— ಸ್ವಾತಂತ್ರ್ಯ ರಜತೋತ್ಸವ ಸಂದರ್ಭದಲ್ಲಿ, ಕೇಂದ್ರ ಕೊಟ್ಟಿರುವ ತಿಳುವಳಿಕೆಯಂತೆ, ಜೈಲುವಾಸ ಅನುಭವಿಸುತ್ತಿರುವ ಖೈದಿಗಳ ಅವಧಿಗಳಲ್ಲಿ ಕಡಮೆ ಮಾಡಲಾಗುವುದು

★

ಮರಣದಂಡನೆಯಲ್ಲಿ ದಯೆತೋರಿಕೆ

ನವದೆಹಲಿ— ಗಾಂಧಿ ಶತಮಾನೋತ್ಸವ ಕಾಲದಲ್ಲಿ ಮಾಡಿದ್ದಂತೆ, ಸ್ವಾತಂತ್ರ್ಯ ರಜತೋತ್ಸವ ಸಂದರ್ಭದಲ್ಲೂ, ಮರಣದಂಡನೆಗೆ ಗುರಿಯಾಗಿರುವವರಿಗೆ ದಯೆತೋರಲು ಭಾರತ ಸರ್ಕಾರ ನಿರ್ಧರಿಸಿದೆ – ಈ ಬಗ್ಗೆ ಸೂಚನೆಯನ್ನು ರಾಜ್ಯ ಸರಕಾರಗಳಿಗೆ ಕಳುಹಿಸಲಾಗುವುದು.

ನಿಧನ

" ಸತ್ಯವಾದಿ " ಸಂಪಾದಕರಾದ ಶ್ರೀ ಎಂ.ಎಸ್. ಕೃಷ್ಣರಾವ್ ಅವರ ಮಗಳು ಮತ್ತು ಬೆಂಗಳೂರು ಮಲ್ಲೇಶ್ವರಂ ಕಾಫಿ ವರ್ಕ್ಸ್ ಮಾಲೀಕರಾದ ಶ್ರೀ ಎ. ಸುಬ್ಬರಾವ್ ಅವರ ಧರ್ಮಪತ್ನಿಯವರು ಆದ ಶ್ರೀಮತಿ ಕಮಲಾಕ್ಷಮ್ಮನವರು ಈ ತಿಂಗಳು 7 ರ ರಾತ್ರಿ 8 ಗಂಟೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

Kannada version of Syt J. Dalmiaji's Article –

" Were Cows slaughtered at King Ranti Deva's Place ? "

" ರಾಜಾ ರಂತೀದೇವ್‌ರವರ ಸ್ಥಳದಲ್ಲಿ ಗೋಹತ್ಯ ಮಾಡಲ್ಪಡುತ್ತಿತ್ತೆ ? "

★

(ಮುಂದುವರಿದುದು)

ಗೋವಂಶದ ಕೊಲೆಯನ್ನು ಹಿಂದು ಹಾಗೂ ಕ್ರಿಶ್ಚಿಯ ಮತಗ್ರಂಥಗಳು ನಿಶೇಧಿಸಿವೆ : ಮುಸ್ಲಿಂ ಮತವೂ ಗೋಮಾಂಸ ಭಕ್ಷಣೆಯನ್ನು ನಿಶೇಧಿಸಿದೆ. ಆದುದರಿಂದ ರಾಜಾರಂತೀದೇವನಿಗೆ ಕೀರ್ತಿ ತರಲು ಗೋಹತ್ಯದಂತಹ ಹೀನ ಕಾರ್ಯಗಳು ಕಾರಣವೆಂದು ಜ್ಞಾನವುಳ್ಳವನ್ಯಾವನೂ ಒಪ್ಪುವುದಿಲ್ಲ. ಆಂದಬಳಿಕ ಮಹಾಭಾರತದಲ್ಲಿಯು ಆಲಭ್ಯಾಂತ ಮತ್ತು ಮಹಾಕವಿ ಕಾಳಿದಾಸನ ಮೇಘದೂತದಲ್ಲಿನ ಆಲಂಭ ಪದಗಳು ಹಿಂಸೆ ಎಂದು ಅರ್ಥ ಕೊಡಲಾರವು

ಮಲ್ಲಿನಾಥರ ಟೀಕೆಯಲ್ಲಿ, ತೊಗಲಿನ ರಾಶಿಯಿಂದ ಸೋರಿದ ರಕ್ತದ ತೊಟ್ಟುಗಳಿಂದ, ಚರ್ಮವತಿ ಎಂಬ ಹೆಸರಿನಿಂದ ಪ್ರಸಿದ್ಧಿಗೊಂಡ ನದಿ ಉತ್ಪಾದನೆಗೊಂಡಿತೆಂದು ಹೇಳಿರುವದು ಗಮನಾರ್ಹವು ಇದಕ್ಕೆ ಮೂಲವು ಮಹಾಭಾರತದ ಶಾಂತಿಪರ್ವದ 29ನೇ ಶ್ಲೋಕವೆಂದು ಕಾಣುತ್ತೆ (ಈ ವಿಷಯ ಹಿಂದೆಯೇ ಚರ್ಚಿಸಲಾಗಿದೆ)

ಕಾಳಿದಾಸ ಮಹಾಕವಿಯ ಮೂಲಗ್ರಂಥದಲ್ಲಿ, ರಕ್ತದ ವಿಷಯವೇನೂ ನಮೂದಿಸಿಲ್ಲದಿರುವದನ್ನೂ ಮತ್ತು ಇದನ್ನು ಸಮರ್ಥಿಸಲು ಯಾವ ಸಮ್ಮತ ಆಧಾರವಿಲ್ಲದಿರುವುದನ್ನೂ ಓದುಗರು ಕಾಣಬಹುದು ಚರ್ಮವತಿ ನದಿ ಹುಟ್ಟುವ ಬಗ್ಗೆ ಮಲ್ಲೀನಾಥರ ಅಂತಹ ಅಭಿಪ್ರಾಯವು ಯಾವ ವಿವೇಕ ಮಾನವನಿಗೂ ಒಪ್ಪಿತವಾಗುವುದಿಲ್ಲ.

ಆಲಭ ಎಂಬ ಪದವು ಎಲ್ಲೂ ಹತ್ಯೆಯನ್ನು ಸೂಚಿಸುವುದಿಲ್ಲ, ಮತ್ತು ಆಲಂಭ ಎಂಬ ಪದಕ್ಕೆ, ಪಡೆಯುವುದು ಎಂದು ಅರ್ಥವಲ್ಲ. ಆ ವಿದ್ವಾಂಸರು ಯಾವ ರುಜುವಾತನ್ನೂ ಕೊಟ್ಟಿಲ್ಲ.

ಯಾವ ನಿಘಂಟುವೂ ಲಂಭ್ ಪದಕ್ಕೆ ಕೊಲ್ಲುವುದು ಎಂದು ಅರ್ಥ ಕೊಟ್ಟಿಲ್ಲ. ಈಗಿನ ಕಾಲದಲ್ಲಿ ಸಂಸ್ಕೃತ ವ್ಯಾಕರಣದಲ್ಲಿ ಮತ್ತು ಸಂಸ್ಕೃತ ಪದಗಳ ಸಂಶೋಧನೆಯಲ್ಲಿ ಐರೋಪ್ಯ ವಿದ್ವಾಂಸರಷ್ಟು ಯಾರೂ ಹೆಚ್ಚು ಶ್ರಮಿಸುವುದಿಲ್ಲ. ಯಾವುದಾದರೂ ಪದವು ಕೊಲ್ಲುವ ಎಂಬ ಅರ್ಥ ಹೊಂದಿದ್ದರೆ, ಅವರ ಸಂಶೋಧನೆಯಲ್ಲಿ ತಪ್ಪಿಸಿಕೊಳ್ಳುತ್ತಿರಲಿಲ್ಲ ; ಯಾಕೆಂದರೆ ಐರೋಪ್ಯ ವಿದ್ವಾಂಸರ ಆಶಯವು ಹಿಂದೂ ಧರ್ಮ ಗ್ರಂಥಗಳು ಕೊಲೆ (ಹಿಂಸಾ) ವಿಧಿಸಿವೆ ಎಂದು ತೋರಿಸಿ, ಪ್ರಚಾರ ಮಾಡುವುದಾಗಿರುತ್ತದೆ.

ವಿವಿಧ ನಿಘಂಟುಗಳಲ್ಲಿ ಪೂರ್ವ ಪ್ರತ್ಯಯ " ಆ " ದ ಎಲ್ಲಾ ಅರ್ಥಗಳಂತೆ, ಲಭ್ ಅಥವಾ ಲಂಭ್ ಮೂಲಗಳು, ಈ ಪೂರ್ವ ಪ್ರತ್ಯಯದೊಡನೆ, ಅಂದರೆ ಆಲಭ ಅಥವಾ ಆಲಂಭ ' ಕೊಲ್ಲುವುದು ' ಎಂದು ಸೂಚಿಸಲಾರವು ; ಹೀಗಿದ್ದರೂ ಕೆಲವು ನಿಘಂಟುಗಾರರು ಆಲಭ ಮತ್ತು ಆಲಂಭಕ್ಕೆ " ಕೊಲ್ಲುವುದು " ಎಂಬರ್ಥ ಕೊಟ್ಟಿರುವುದು, ಸಾಂಪ್ರದಾಯಕ ಅರ್ಥದಲ್ಲಿ ಮಾತ್ರ ಸಾಧ್ಯವು. ಈ ನಿಘಂಟುಗಳು ಈ ಎರಡು ಪದಗಳಿಗೆ– ಪಡೆಯುವುದು, ಮುಟ್ಟುವುದು, ಹಿಡಿಯುವುದು, ಇತ್ಯಾದಿ ಅರ್ಥಗಳನ್ನು ಕೊಟ್ಟಿವೆ. ಇವು ಕೊಲ್ಲುವುದಕ್ಕೆ ಏನೂ ಸಂಬಂಧವಿಲ್ಲ. ಪೂರ್ವಾಪರ ವಿಚಾರಗಳನ್ನನುಸರಿಸಿ ಅರ್ಥಮಾಡಿಕೊಳ್ಳಬೇಕು.

ಯಜುರ್ವೇದ 30 5 ರಲ್ಲಿ ಆಲಭ್ ಗೆ, ಪಡೆಯುವುದು ಸ್ವೀಕರಿಸುವುದ್ಯ ಎಂಬ ಅರ್ಥವಾಗುತ್ತದೆ—

1 ಬ್ರಹ್ಮಣೆ ಬ್ರಾಹ್ಮಣಂ ಆಲಭತೆ .... ವಿದ್ಯೆಗೆ ಅವನು ಒಬ್ಬ ವಿದ್ವಾಂಸನನ್ನು ಪಡೆಯುತ್ತಾನೆ.

ಕ್ಷತ್ರಾಯ ರಾಜನ್ಯಂ ಆಲಭತೆ .... ವೀರತ್ವಕ್ಕೆ ಅವನು ಒಬ್ಬ ವೀರನನ್ನು ಪಡೆಯುತ್ತಾನೆ.

ನೈತ್ಯಾಯ ಸೂತಂ ಆಲಭತೆ .... ನೈತ್ಯಕ್ಕೆ ಅವನು ಒಬ್ಬ ಸೂತನನ್ನು ಸಂಪಾದಿಸುತ್ತಾನೆ.

4 ಧರ್ಮಾಯ ಸಮಾಚರಂ ಆಲಭತೆ .... ಧರ್ಮಕ್ಕೆ ಅವನು ಮತಸಂಘದ ಒಬ್ಬ ಪದಸ್ಥನನ್ನು ಸ್ವೀಕರಿಸುತ್ತಾನೆ.

[ಮುಂದುವರಿಯುವುದು]

★

ಜಗದ್ಗುರುಗಳವರ ಕೃಪೆ

ಶ್ರೀ ಜಗದ್ಗುರು ಶಂಕರಾಚಾರ್ಯರವರ ಶ್ರೀ ಕಂಚೀ ಕಾಮಕೋಟಪೀಠಾಧಿಪತಿಪತಿಗಳಾದ ಶ್ರೀ ಶ್ರೀ ಜಯೇಂದ್ರ ಸರಸ್ವತೀ ಮಹಾಸ್ವಾಮಿಗಳವರು " ಗೋರಕ್ಷಣ " ಕ್ಕೆ ಇಪ್ಪತ್ತೈದು ರೂಪಾಯಿಗಳನ್ನು ಆಶೀರ್ವಾದ ಪೂರ್ವಕವಾಗಿ ದಯಮಾಡಿಸಿದ್ದಾರೆ. ಅವರ ಭಾವಚಿತ್ರ ಮತ್ತು ದೇವರ ಲಾಕೆಟ್ ಅನ್ನು ಕೃಪೆಮಾಡಲಿದ್ದಾರೆ.

Cow — An American View

In a recent Issue of " New York Times " there appeared an article entitled " Holy men of India : In search of the seekers of Truth ". This article contained a very un-intelligent account of the Sadhus and the cow. The Issues was confused by a Mr Kushwant Singh, who admits his " anti-Sadhu " bias. Had a less prejudiced writer dealt with the subject, we Americans would have got a different picture of the Sadhus and the cow Issue in India.

From time immemorial the Hindus have been vegetarians. From time immemorial the cow has symbolized a religious and moral principle. Is this hard to understnd ? Perhaps it is difficult in these athestical days to understand how there can be men with religious principles, men who are devoted to God and the higher principles leading to union with Him.

The Hindus consider the cow as a mother. The cow has always symbolized placidity, and Krishna Himself, the Supreme Lord, is well-known as a Cowherd Boy and a lover of cows Should all these sentiments be sacrificed ? These sentiments have been with the Indian people over the ages. They are not recent ' silly food fads ' as Mr Singh writes. The Shastric (Vedic) injunctions, not less than 5000 years explicitly condemned killing ' Gau Mata ' who gives milk to man In the Shastras it is stated that there are seven kinds of mothers : (1) the familiar mother (2) the wife of the Guru (teacher), (3) the wife of a Brahmin (4) the queen (5) the cow (6) the nurse, and (7) the earth.

Rather than sacrifice the Vedas and religious principles, why not appeal to other countries– such as United States that are throwing surplus food away ? Why should the people follow the injunctions of people like Mr Singh, who consider himself a dashing ' defier of traditions ? Our duty lies rather in following the scriptures graciously given us by the Supreme Lord and His pure devotees– not following the morally blind and demoniac.

Now that the Britishers are gone, the Indian Government claims to represent the people. Eighty-five per cent of the Indian population is Hindu and considers (or should consider) the Cow sacred. How can the Government be said to represent the people when it sacrifices these important sentiments ? It cannot be argued that the cows's meat is needed to keep the people from starvation That argument is fallacious because it does not stand to reason that cow–flesh should be offered in place of grains and vegtables and fruits to a hungry vegetarian. When a man asks for bread, you do not offer him a stone. As far as flesh-eaters are concerned, they can eat the flesh of other animals The meat is not being used to feed a hungry people– rather, the cows are beieg slaughtered to exchange their skins with the Russians for machinery. (To be continued)

[Kalyan Kalpataru] Howard M. Wheeler, New York.

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore